# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ ಎಫ್. ಸಿ ನ್ಯಾಯಾಲಯ

# ಹಿರೇಕೆರೂರು

ಸಿ.ಸಿ. ನಂಃ 98/2023

**ಪಿ.ಡಬ್ಲ್ಯೂಃ 3**

ಸಿ.ಡಬ್ಲ್ಯೂಃ 5

ಸಾಕ್ಷಿದಾರರ ಹೆಸರುಃ – ಕಲ್ಲೇಶ

ತಂದೆ ಹೆಸರು – ರುದ್ರಗೌಡ ಮರ್ಕಳ್ಳಿ

ವಯಸ್ಸುಃ – 27 ವರ್ಷ

ಉದ್ಯೋಗ – ವ್ಯವಸಾಯ

ವಾಸಸ್ಥಳ – ದೂದಿಹಳ್ಳಿ

ದಿನಾಂಕಃ 23–06–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ – ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿತರಾದ ಗದಿಗೆಪ್ಪ, ಕಲ್ಲನಗೌಡ, ನಾಗರಾಜ, ಶಿವರಾಜ, ಈರನಗೌಡ, ಸಾವಿತ್ರಾ ಹಾಗೂ ಅನ್ನಪೂರ್ಣ ನಮ್ಮ ಸಂಬಂಧಿಕರು. ಇಂದು ಕಲ್ಲಪ್ಪ, ಸಾವಿತ್ರಾ, ಶಿವರಾಜ, ಅನ್ನಪೂರ್ಣ ನ್ಯಾಯಾಲಯಕ್ಕೆ ಬಂದಿಲ್ಲ, ಅವರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಆರೋಪಿತರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲವೆಂದು ಅವರ ವಕೀಲರು ಅರ್ಜಿಯನ್ನು ಸಲ್ಲಿಸಿದ್ದಾರೆ.

2. ದೂದಿಹಳ್ಳಿ ಗ್ರಾಮದ 404/2 ರಲ್ಲಿ ನಮ್ಮ ಅಜ್ಜನ ಕಾಲದಿಂದ ಬಣವಿ, ದನದಕೊಟ್ಟಿಗೆ ಇವೆ. ಅವುಗಳನ್ನು ನಾವು ವಹಿವಾಟು ಮಾಡಿಕೊಂಡಿದ್ದೆವೆ. ಸದರಿ ಆಸ್ತಿಯ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದೆ.

3. ದಿಃ 11–02–2022 ರಂದು ಬೆಳಿಗ್ಗೆ 10–30 ಗಂಟೆಗೆ ಆರೋಪಿತರೆಲ್ಲರೂ 4–5 ಜನ ಗುಂಡಾಗಳನ್ನು ಕರೆದುಕೊಂಡು ಬಂದು, ನಮ್ಮ ಬಣವಿ ಕಿತ್ತು, ದನಗಳನ್ನು ಬಿಚ್ಚಿ ಓಡಿಸಿದರು. ನಾನು ಮತ್ತು ನಮ್ಮ ಅಮ್ಮ ಯಾಕೆ ಹೀಗೆ ಮಾಡುತ್ತೀರಿ ಎಂದು ಕೇಳಿದೆವು. ಆಗ ಗಂಡ ಮಕ್ಕಳು ಎಲ್ಲರೂ ಸೇರಿ ನಮ್ಮ ಅಮ್ಮನ ಸೀರೆಯನ್ನು ಹಿಡಿದು ಎಳೆದು, ಅವಾಚ್ಯ ಶಬ್ದಗಳಿಂದ ಬೈದು, ದೊಣ್ಣೆ ಹಾಗೂ ಕಲ್ಲನ್ನು ತೆಗೆದುಕೊಂಡು ಹೊಡೆದರು. ನಮ್ಮ ಚಿಕ್ಕಪ್ಪ ಚಂದ್ರಪ್ಪ ಹಾಗೂ ಆತನ ಮಗ ಸುಭಾಸ ಅವರು ಬಿಡಿಸಲು ಬಂದರು ಅವರಿಗೂ ಸಹ ಶಿವರಾಜ ಈತನು ದೊಣ್ಣೆಯಿಂದ ತಲೆಗೆ ಹೊಡೆದು ಗಾಯ ಮಾಡಿದ.

4. ಜಗಳವನ್ನು ನೋಡಿ ನಮ್ಮ ಊರಿನಲ್ಲಿರುವ ಶಂಭುಗೌಡ ಮರ್ಕಳ್ಳಿ, ಕಲ್ಲನಗೌಡ ಮರ್ಕಳ್ಳಿ, ಶರಣವ್ವ ಮರ್ಕಳ್ಳಿ ಹಾಗೂ ಹೂವಪ್ಪ ವಡ್ಡಿನಕಟ್ಟಿ ಹಾಗೂ ಊರಿನ ಮುಖಂಡರು ಎಲ್ಲರೂ ಸೇರಿ ಜಗಳವನ್ನು ಬಿಡಿಸಿದರು. ಆಗ ಆರೋಪಿತರೆಲ್ಲರೂ ಇವರು ಬಂದು ಬಿಡಿಸಿದ್ದರಿಂದ ಉಳಿದಿರುವಿರಿ, ಇಲ್ಲದಿದ್ದರೇ ನಿಮ್ಮನ್ನು ಜೀವ ಸಹಿತ ಹೂತು ಹಾಕುತ್ತಿದ್ದೇವೆಂದು ಹೇಳಿದರು.

5. ಆಮೇಲೆ ಚಂದ್ರಪ್ಪ ಮರ್ಕಳ್ಳಿ ಹಾಗೂ ಸುಭಾಸ ಮರ್ಕಳ್ಳಿ ಮತ್ತು ನಾನು ಹಿರೇಕೆರೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇವೆ. ದಿಃ 20–02–2022 ರಂದು ನಮ್ಮ ತಾಯಿ ಪೋಲಿಸ ಠಾಣೆಗೆ ಹೋಗಿ ದೂರು ಕೊಟ್ಟಿದ್ದಾರೆ. ಇದನ್ನು ಪೋಲಿಸರ ಮುಂದೆ ಹೇಳಿದ್ದೇನೆ. ಆವತ್ತು ಆರೋಪಿತರು ಹೊಡೆಯಲು ಬಳಸಿದ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ತೋರಿಸಿದ ಬಡಿಗೆಯನ್ನು ಈಗಾಗಲೇ ಮುದ್ದೆ ಮಾಲು –1 ಎಂದು ಗುರುತಿಸಲಾಗಿದೆ.

**ಪಿ.ಡಬ್ಲ್ಯೂಃ 3**

ಸಿ.ಡಬ್ಲ್ಯೂಃ 5

**ಪಾಟೀ ಸವಾಲುಃ 1, 3, 4 ಹಾಗೂ 7 ನೇ ಆರೋಪಿಗಳ ಪರ ಶ್ರೀ ಎ. ಎ. ಇ. ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನಾನು ಪಿ.ಯು.ಸಿ. ವರೆಗೆ ಓದಿದ್ದೇನೆ. ದಿಃ 11-02-2022 ರಂದು ಬೆಳಿಗ್ಗೆ 10-30 ಗಂಟೆಗೆ ಆರೋಪಿತರು ಬಂದು ಗೋವಿನ ಜೋಳದ ಮೇವು ಹಾಗೂ ಭತ್ತದ ಮೇವಿನ ಬಣವಿಯನ್ನು ಕಿತ್ತು ಹಾಕಿದರು. ಆ ಬಣವಿಗಳು 1, 3, 4 ಹಾಗೂ 7 ನೇ ಆರೋಪಿಗಳಿಗೆ ಸಂಬಂಧಿಸಿದ್ದು, ಆದರೂ ಅವು ನಮ್ಮವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದನದ ಕೊಟ್ಟಿಗೆಯಲ್ಲಿ 3 ಆಕಳು ಇದ್ದವು, ಎಮ್ಮೆ ಇರಲಿಲ್ಲ, ಅವು ನಮ್ಮವು. ಆ ದನದ ಕೊಟ್ಟಿಗೆ 1, 3, 4 ಹಾಗೂ 7 ನೇ ಆರೋಪಿಗಳಿಗೆ ಸಂಬಂಧಿಸಿದ್ದು, ಅವರ ಕೊಟ್ಟಿಗೆಯಲ್ಲಿ ಕಟ್ಟಿದ್ದ ದನಗಳಿಗೆ ಮೇವು ಹಾಕಲು ಹೋಗಿದ್ದರು ಎಂದರೆ ಸರಿಯಲ್ಲ. ಶಿವಕುಮಾರ ಗದಿಗೆಪ್ಪ, ನಾಗರಾಜ ಗದಿಗೆಪ್ಪ ಮರ್ಕಳ್ಳಿ ಇವರು ನಮ್ಮ ತಾಯಿಯ ಸೀರೆ ಎಳೆದು, ಒದ್ದರು ಹಾಗೂ ಹೊಡೆದರು. ಈ ಸಂಗತಿಯನ್ನು ನಾನು ಪೋಲಿಸರಿಗೆ ಹೇಳಿ ಬರೆಸಿದ್ದೇನೆ. ಈ ಸಂಗತಿಯನ್ನು ನಾನು ಪೋಲಿಸರಿಗೆ ಹೇಳಿ ಬರೆಸಿಲ್ಲವಾದರು ಸಹ ಹೇಳಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಂಭುಗೌಡ ಮರ್ಕಳ್ಳಿ ಜಗಳ ಬಿಡಿಸಿದರು ಎಂದು ನಾನು ಪೋಲಿಸರ ಮುಂದೆ ಹೇಳಿಲ್ಲವೆಂದರೆ ಸರಿಯಲ್ಲ. ನಾನು ಹೇಳಿದ ಘಟನೆಯು ನಡದೇ ಇಲ್ಲ ಮತ್ತು ಶಂಭುಗೌಡ ಮರ್ಕಳ್ಳಿ ಅಲ್ಲಿ ಇರಲೇ ಇಲ್ಲ, ಆದರೂ ಸಹ ನಾನು ಸುಳ್ಳು ಘಟನೆಯನ್ನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಮ್ಮ ಮತ್ತು ಆರೋಪಿಗಳ ನಡುವೆ ಜಾಗೆಯ ಸಂಬಂಧ ಸಿವಿಲ್ ಪ್ರಕರಣ ಇವೆ ಎಂದರೆ ಸರಿ. ನಾವು ಆರೋಪಿಗಳಿಗೆ ಹೊಡೆದಿದ್ದೇವೆಂದು ಅವರು ನಮ್ಮ ವಿರುದ್ಧ ದೂರು ಕೊಟ್ಟಿದ್ದಾರೆ, ಆ ಪ್ರಕರಣವು ಸಹ ಇದೇ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ ಎಂದರೆ, ನಾವು ಹೊಡೆದಿಲ್ಲ, ಅವರೇ ಹೊಡೆದಿದ್ದಾರೆ. ನಾವು ಆರೋಪಿಗಳಿಗೆ ಹೊಡೆದಿದ್ದರಿಂದ ಅವರು ನಮ್ಮ ವಿರುದ್ದ ದೂರು ಕೊಟ್ಟಿದ್ದಾರೆ, ಅದನ್ನು ಮುಚ್ಚಿ ಹಾಕಲು ಆರೋಪಿಗಳ ವಿರುದ್ದ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಹತ್ತಿರ ವಿಡಿಯೋ ಇದೆ ಬೇಕಾದರೆ ಕೊಡುತ್ತೇವೆ.

3. ಈಗ ನನಗೆ ತೋರಿಸಿದ ಮುದ್ದೆ ಮಾಲು-1 ರಂತಹ ಕಟ್ಟಿಗೆಗಳು ಸಾಮಾನ್ಯವಾಗಿ ಹೊಲದಲ್ಲಿ ಹಾಗೂ ಮನೆಯಲ್ಲಿ ಸಿಗುತ್ತವೆ ಎಂದರೆ, ಅವರು ಇದೇ ಕೋಲನ್ನು ತೆಗೆದುಕೊಂಡು ಹೊಡೆಯಲು ಬಂದಿದ್ದರು. ಇಂತಹ ಕೋಲನ್ನು ದನ ಕರು ಮೇಯಿಸಲು ಹೋದಾಗ ಅವುಗಳನ್ನು ಹೊಡೆಯಲು ತೆಗೆದುಕೊಂಡು ಹೋಗುತ್ತಾರೆಂದರೆ, ಅವರು ಇದೇ ಕೋಲನ್ನು ತೆಗೆದುಕೊಂಡು ಹೊಡೆದರು. ಸದರಿ ಮುದ್ದೆ ಮಾಲು ಕೋಲಿನಿಂದ ಆರೋಪಿಗಳು ಹೊಡೆಯದಿದ್ದರೂ ಸಹ, ನಾನು ಸದರಿ ಕೋಲಿನಿಂದ ಹೊಡೆದಿದ್ದಾರೆಂದು ಪದೇ ಪದೇ ಹೇಳುತ್ತಿದ್ದೇನೆಂದರೆ ಸರಿಯಲ್ಲ.

4. ಘಟನೆಗೂ ಆರೋಪಿಗಳಿಗೂ ಯಾವುದೇ ರೀತಿಯ ಸಂಬಂಧವಿಲ್ಲ, ನಾನು ಸ್ಥಳದಲ್ಲಿ ಇರಲಿಲ್ಲ, ನನ್ನ ತಾಯಿ ದೂರು ಕೊಟ್ಟಿದ್ದಾಳೆಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಿ.ಡಬ್ಲ್ಯೂಃ 3**

ಸಿ.ಡಬ್ಲ್ಯೂಃ 5

**ಪಾಟೀ ಸವಾಲುಃ 2, 5 ಹಾಗೂ 6 ನೇ ಆರೋಪಿಗಳ ಪರ ಶ್ರೀ ಬಿ. ಎಂ. ಹೆಚ್. ವಕೀಲರಿಂದಃ**

ಕೊಪ್ಪಲು ಜಾಗದ ಬಗ್ಗೆ ನಮ್ಮ ಮತ್ತು ಆರೋಪಿಗಳ ನಡುವೆ ಸುಮಾರು 30-40 ವರ್ಷಗಳಿಂದ ವ್ಯಾಜ್ಯವಿದೆ ಎಂದರೆ ಸರಿ. ಆದ್ದರಿಂದ ನಮ್ಮ ಮತ್ತು ಆರೋಪಿಗಳ ನಡುವೆ ವೈಮನಸ್ಸು ಇದೆ ಎಂದರೆ ಸರಿ. ಗಲಾಟೆಯಾದ 9 ದಿನಗಳ ನಂತರ ನಮ್ಮ ತಾಯಿ ದೂರು ಕೊಟ್ಟಿದ್ದಾರೆ. ಚಂದ್ರಪ್ಪ, ಈರನಗೌಡ, ಕಲ್ಲೇಶ ಹಾಗೂ ಸುಭಾಸ ಮತ್ತು ನನ್ನ ವಿರುದ್ಧ ಆರೋಪಿತರು ಕೊಟ್ಟಿರುವ ದೂರು ಇದೇ ನ್ಯಾಯಾಲಯದಲ್ಲಿ ಸಿಸಿ ನಂಃ 97/2023 ಎಂದು ದಾಖಲಾಗಿದೆ ಅದರಲ್ಲಿ ನಾನು 3 ನೇ ಆರೋಪಿ ಎಂದರೆ ಸರಿ. ಕೊಪ್ಪಲು ಜಾಗದ ಬಗ್ಗೆ ನಮ್ಮ ಮತ್ತು ಆರೋಪಿಗಳ ನಡುವಿನ ವ್ಯಾಜ್ಯ ಈಗ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕಳೆದ 19 ವರ್ಷಗಳಿಂದ ವಿಚಾರಣೆಯಲ್ಲಿದೆ ಎಂದರೆ ಸರಿ. ಅದರಲ್ಲಿ ಕಬ್ಜೆ ತಪ್ಪಿಸಬಾರದು ಎಂದು ಅದೇಶವಾಗಿದೆ. ನಾನು ಹೇಳಿದ ಘಟನೆ ನಡೆದಿಲ್ಲವೆಂದರೆ ಸರಿಯಲ್ಲ. ಗಲಾಟೆಯಾದಾಗ ಆರೋಪಿತರಾದ ಕಲ್ಲನಗೌಡ ಮರ್ಕಳ್ಳಿ ,ಈರನಗೌಡ ಹಾಗೂ ಸಾವಿತ್ರಿ ಇರಲಿಲ್ಲವೆಂದರೆ, ಸಾವಿತ್ರಿ ಇರಲಿಲ್ಲವೆಂದು ನಂತರ ಇದ್ದರು ಎಂದು ಸಾಕ್ಷಿ ಹೇಳಿದ್ದಾರೆ. ಆಸ್ತಿ ವ್ಯಾಜ್ಯದ ಸಂಬಂಧ ಇರುವ ವೈಮನಸ್ಸಿನಿಂದ ಆರೋಪಿಗಳ ವಿರುದ್ಧ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 23-06-2026

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು